# ಆಹಾ ಸುದ್ದಿ!

★ ಸಸಿತೋಟ



ಹಾವಿನ ಜೊತೆಗೆ ನೃತ್ಯ ಮಾಡುವುದನ್ನು ನೋಡುವುದಾದರೆ ಈಜಿಪ್ಟ್‌ಗೆ ಹೋಗಬೇಕು. ಅಮೀರ್ ರಫೈ ಸರ್ಪದ ಜೊತೆಗೆ ನರ್ತಿಸುವುದನ್ನು ನೋಡಲು ಸಾವಿರಾರು ಜನ ಸೇರುತ್ತಾರಂತೆ. ಆದರೆ ಮನುಷ್ಯರೇ ಹಾವಿನ ನೃತ್ಯ ಮಾಡುವುದನ್ನು ನೋಡುವುದಾದರೆ ನಮ್ಮ ಸಿನಿಮಾಗಳನ್ನು ವೀಕ್ಷಿಸಬೇಕು.

ಫ್ಲಾರಿಡಾದಲ್ಲಿ ಕಾರೊಂದು ಕಳುವಾಯಿತು. ಕಾರು ಅಪಘಾತವಾಗಿ ಕಳ್ಳರು ಪೊಲೀಸರಿಂದ ತಪ್ಪಿಸಿಕೊಳ್ಳಲು ಓಡತೊಡಗಿದರಂತೆ. ಆದರೆ ಅವರನ್ನು ಹಿಡಿದಿದ್ದು ಪೊಲೀಸರಲ್ಲ, ಹಸುಗಳು. ಅಟ್ಟಿಸಿಕೊಂಡು ಮುತ್ತಿಗೆ ಹಾಕಿದವಂತೆ. ಕಾನೂನು ಸುವ್ಯವಸ್ಥೆ ಕಾಪಾಡಲು ಪೊಲೀಸರಿಗಿಂತ ಪ್ರಾಣಿಗಳೇ ವಾಸಿ ಎಂದು ಸರ್ಕಾರ ಗೊಣಗುತ್ತಿರಬಹುದು.



ಫ್ರಾನ್ಸ್‌ನ ಥೀಮ್ ಪಾರ್ಕ್‌ನಲ್ಲಿ ನೀವು ಕಸ ಚೆಲ್ಲಿದ ತಕ್ಷಣ ಅದು ಮಾಯವಾಗಿಬಿಡುತ್ತದೆ. ಕೆಲಸದವರು ಅಷ್ಟು ಚುರುಕು ಎಂದಿರಾ? ಇಲ್ಲ, ಕಾಗೆಗಳು ತಕ್ಷಣ ಹಾರಿಬಂದು ಅದನ್ನು ಎತ್ತಿಕೊಂಡು ಹೋಗಿ ಕಸದ ಬುಟ್ಟಿಗೆ ಹಾಕಲು ತರಬೇತಿ ನೀಡಲಾಗಿದೆಯಂತೆ. ಕಸ ಚೆಲ್ಲಿ ನಾಗರಿಕ ಪ್ರಜ್ಞೆ ಮರೆತವರನ್ನು ಕುಕ್ಕುವುದೊಂದು ಬಾಕಿ.



ಸ್ಪೇನಿನ ಜನ 8–9ನೇ ಶತಮಾನದಲ್ಲಿ ಯೂರೋಪ್ ಮೇಲೆ ಮುಗಿಬಿದ್ದ ವೈಕಿಂಗ್ ದಾಳಿಕೋರರನ್ನು ಇನ್ನೂ ಮರೆತಿಲ್ಲ. ಪ್ರತೀ ವರ್ಷ ವೈಕಿಂಗ್ ಉತ್ಸವವನ್ನೇ ಅಲ್ಲಿ ಆಚರಿಸಲಾಗುತ್ತದೆಯಂತೆ. ಯುದ್ಧದಲ್ಲಿ ಗೆಲುವಿನ ಆಚರಣೆ ಗೊತ್ತಿದೆ, ಆದರೆ ಈ ರೀತಿ ಸೋಲಿನ ಉತ್ಸವ ಸ್ಪಾನಿಶ್ ಜನರಿಗೆ ಮಾತ್ರ ಗೊತ್ತಿರುವಂತಹದ್ದು.

ಜರ್ಮನಿಯ ಬೈಕ್ ರೇಸ್ ಪಟು ನಿಕೊ ಸೃಜನಶೀಲತೆಯ ಪ್ರತೀಕವಂತೆ ಈ ಹೆಲ್ಮೆಟ್. ಭೀಕರತೆ ಮತ್ತು ಸೃಜನಶೀಲತೆಯ ಮಧ್ಯೆ ಕೊಂಡಿ ಹಾಕುವ ಯತ್ನ ಮಾಡುತ್ತಿದ್ದಾನಂತೆ.



ಹಾಂಗ್‌ಕಾಂಗ್‌ನಲ್ಲಿ ಪ್ರತಿಭಟನಾ ವಿಧಾನವೇ ಬದಲಾಗಿದೆಯಂತೆ. ನಗರದ ವೃತ್ತದಲ್ಲಿ ಸೇರಿ ಘೋಷಣೆ ಕೂಗುವುದರ ಬದಲು ನಲ್ಲಿ ರಿಪೇರಿ, ವಿದ್ಯುತ್ ಸಂಪರ್ಕ ಸರಿಪಡಿಸುವುದು, ಮನೆಯಲ್ಲಿ ಹಾಳಾದ ಗೃಹೋಪಯೋಗಿ ಉಪಕರಣಗಳ ರಿಪೇರಿ ಮಾಡುತ್ತಾರಂತೆ. ‘ಫಿಕ್ಸಿಂಗ್ ಹಾಂಗ್‌ಕಾಂಗ್’ ಎಂಬ ಈ ಸಂಘಟನೆಗೆ ಕಲ್ಲು ತೂರಾಟ, ವಾಹನಗಳಿಗೆ ಬೆಂಕಿ ಇಡುವುದರಲ್ಲಿ ನಂಬಿಕೆ ಇಲ್ಲವಂತೆ. ನಂಬಿಕೆ ಏನಾದರೂ ಇದ್ದರೆ ನಂಬಿಕೆ ಕಳೆದುಕೊಳ್ಳುವಂತೆ ಮಾಡುವವರು ಅಲ್ಲಿಯ ಜೈಲಿನಲ್ಲಿದ್ದಾರೆ.